**ಕರ್ನಾಟಕ ವಿಧಾನ ಪರಿಷತ್ತು ಮಾನ್ಯ ಸದಸ್ಯರುಗಳಾದ ಶ್ರೀ ಕೇಶವ ಪ್ರಸಾದ್ ಎಸ್., ಡಾ: ತಳವಾರ್ ಸಾಬಣ್ಣ, ಶ್ರೀ ಪಿ.ಹೆಚ್. ಪೂಜಾರ್ ಹಾಗೂ ಇತರರು ನಿಯಮ 330 ರ ವಿಷಯಕ್ಕೆ ಸಂಬಂಧಿಸಿದ ಮಾಹಿತಿ ಒದಗಿಸುವ ಕುರಿತು :-**

**ವಿಷಯ :-**

ರಾಜ್ಯಾದ್ಯಂತ ನೇಕಾರ ಮತ್ತು ನೇಕಾರಿಕೆ ಆರ್ಥಿಕ ಮುಗ್ಗಟ್ಟಿನಿಂದ ಮಾರುಕಟ್ಟೆಯ ಅಸ್ಥಿರತೆಯಿಂದ ವೈಜ್ಞಾನಿಕ ಬೆಲೆಯನ್ನು ನಿಗದಿ ಮಾಡದ ಕಾರಣ ಮತ್ತು ರಾಜ್ಯ ಸರ್ಕಾರದ ಯೋಜನೆಗಳು ಕಟ್ಟಕಡೆಯ ನೇಕಾರರಿಗೆ ಸಮರ್ಪಕವಾಗಿ ತಲುಪದೇ ವಂಚಿತರಾಗಿದ್ದು ಅತೀವೃಷ್ಠಿ, ಅನಾವೃಷ್ಠಿ, ಲಾಕ್ ಡೌನ್‌ನಿಂದಾಗಿ ಔದ್ಯೋಗಿಕ, ಶೈಕ್ಷಣಿಕ, ಆರ್ಥಿಕ ಭದ್ರತೆಯೂ ಇಲ್ಲದ ಕಾರಣ ಇಂದು ನೇಕಾರರು ತೀವ್ರ ಸಂಕಷ್ಟವನ್ನು ಎದುರಿಸುತ್ತಿದ್ದು, ಲಕ್ಷಾಂತರ ಜನರು ನೇಕಾರಿಕೆ ವೃತ್ತಿಯನ್ನೇ ತೊರೆಯುತ್ತಿದ್ದಾರೆ. ಸರ್ಕಾರದಿಂದ ಸಮರ್ಪಕ ಯೋಜನೆಗಳು ಸಿಗದೆ 60 ಲಕ್ಷ ನೇಕಾರರಲ್ಲಿ ಕೇವಲ 10% ನೇಕಾರರು ಮಾತ್ರ ಈ ಉದ್ಯಮದಲ್ಲಿ ತೊಡಗಿಕೊಂಡಿದ್ದಾರೆ. ಮುಂದಿನ ಕೆಲವು ವರ್ಷಗಳಲ್ಲಿ ನೇಕಾರರೆ ಇಲ್ಲದ ಸ್ಥಿತಿ ನಿರ್ಮಾಣವಾಗುತ್ತದೆ. ಘನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಈ ಕುರಿತು ಗಂಭೀರವಾಗಿ ಚಿಂತನೆಗೊಳಪಡಿಸಿ ಸೂಕ್ತ ಕ್ರಮ ವಹಿಸುವ ನಿಟ್ಟಿನಲ್ಲಿ ಸದನದಲ್ಲಿ ನಿಯಮ 330 ರ ನಿಯಮದಡಿ ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಉತ್ತರ :-**

4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 54250 ಕೈಮಗ್ಗ ನೇಕಾರರಿದ್ದು, 29377 ಕೈಮಗ್ಗಗಳು ಇರುತ್ತವೆ. ರಾಜ್ಯದ ಕೈಮಗ್ಗಗಳಲ್ಲಿ ರೇಷ್ಮೆ / ಹತ್ತಿ ಸೀರೆಗಳು, ಟವಲ್, ಬೆಡ್‌ಶೀಟ್, ಕರವಸ್ತ್ರ, ಉಣ್ಣೆ ಕಂಬಳಿ / ಗುಳೇದಗುಡ್ಡ ಖಣ, ಇನ್ನಿತರ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತಿದೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಸುಮಾರು 9000 ನೇಕಾರರು ನೊಂದಾಯಿಸಿಕೊಂಡಿದ್ದು, ಈ ಪೈಕಿ 3850 ನೇಕಾರರು ಪ್ರಸ್ತುತ ನೇಕಾರಿಕೆ ವೃತ್ತಿಯಲ್ಲಿ ತೊಡಗಿರುತ್ತಾರೆ.

ನೇಕಾರ ಮತ್ತು ನೇಕಾರಿಕೆ ಆರ್ಥಿಕ ಮುಗ್ಗಟ್ಟಿನಿಂದ ಮಾರುಕಟ್ಟೆಯ ಅಸ್ಥಿರತೆಯಿಂದ ವೈಜ್ಞಾನಿಕ ಬೆಲೆಯನ್ನು ನಿಗದಿ ಮಾಡಿರುವುದಿಲ್ಲ. ಆದರೆ ಕೈಮಗ್ಗ ನೇಕಾರರು ಉತ್ಪಾದನೆಗೆ ಅವಶ್ಯವಿರುವ ಹತ್ತಿ / ಕಚ್ಚಾ ರೇಷ್ಮೆಯನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ, ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಹಾಗೂ ಸ್ಥಳೀಯ ಮಾರುಕಟ್ಟೆಯಿಂದ ಪಡೆಯುತ್ತಿದ್ದಾರೆ. ಸದರಿ ಕಚ್ಚಾ ಮಾಲು ಖರೀದಿ ಮೇಲೆ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಪ್ರತಿ ಕೆ.ಜಿ. ಗೆ 15 ರೂ.ಗಳ ಸಹಾಯಧನ ನೀಡಲಾಗುತ್ತಿದೆ ಹಾಗೂ ಕೇಂದ್ರ ಸರ್ಕಾರದ NHDP ಯೋಜನೆಯಡಿ ಶೇ.15 ರಷ್ಟು ಕಚ್ಚಾ ಮಾಲು ಖರೀದಿ ಸಹಾಯಧನ ನೀಡಲಾಗುತ್ತಿದೆ.

ನೇಕಾರರ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಹಾಗೂ ಸ್ಪರ್ಧಾತ್ಮಕ ದರಗಳಲ್ಲಿ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಲು 2023-24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-265 ರಲ್ಲಿ ಘೋಷಿಸಿದಂತೆ 01 ರಿಂದ 10 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸಿ ಶೂನ್ಯ ಬಿಲ್ ನೀಡಲು ಹಾಗೂ 10 ಕ್ಕಿಂತ ಹೆಚ್ಚು ಮತ್ತು 20 ಹೆಚ್.ಪಿ.ವರೆಗಿನ ವಿದ್ಯುತ್ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳಿಗೆ ಪ್ರಸ್ತುತ ಚಾಲ್ತಿಯಲ್ಲಿರುವಂತೆ ಪ್ರತಿ ಯೂನಿಟ್‌ಗೆ ರೂ.1.25/- ರ ರಿಯಾಯಿತಿ ದರದಲ್ಲಿ ಮಾಸಿಕ ಗರಿಷ್ಠ 500 ಯೂನಿಟ್‌ಗಳವರೆಗೆ ವಿದ್ಯುತ್ ಒದಗಿಸಲು ಸರ್ಕಾರದ ಆದೇಶ ಸಂಖ್ಯೆ: CI/37/JAKY/2023, ಬೆಂಗಳೂರು ದಿನಾಂಕ: 20.10.2023 ರಲ್ಲಿ ಆದೇಶಿಸಲಾಗಿರುತ್ತದೆ. ಸದರಿ ಸರ್ಕಾರದ ಆದೇಶದ ಪ್ರಕಾರ ಅಗತ್ಯ ಕ್ರಮಕೈಗೊಳ್ಳಲು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸೂಚನೆ ನೀಡಲಾಗಿದ್ದು, ಅದರಂತೆ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗಿದೆ.

**ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನೇಕಾರರ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.**

1. **ನೇಕಾರ ಸಮ್ಮಾನ್ ಯೋಜನೆ (ಕೈಮಗ್ಗ ನೇಕಾರರಿಗೆ) :-** 2023-24 ನೇ ಸಾಲಿಗೆ ನೇಕಾರರ ಸಮ್ಮಾನ್ ಯೋಜನೆಯಡಿ ರಾಜ್ಯದಲ್ಲಿ 45865 ಕೈಮಗ್ಗ ನೇಕಾರರು ನೊಂದಣಿಯಾಗಿರುತ್ತಾರೆ. ಈ ಪೈಕಿ ಖಜಾನೆಯಿಂದ ಅನುಮೋದನೆಯಾಗಿರುವ 42968 ಕೈಮಗ್ಗ ನೇಕಾರರಿಗೆ ದಿನಾಂಕ: 21.11.2023 ರ ಬಿಡುಗಡೆ ಆದೇಶದಲ್ಲಿ ತಲಾ ರೂ.5,000/- ಗಳಂತೆ ಒಟ್ಟು ರೂ.2148.40 ಲಕ್ಷಗಳನ್ನು ಡಿ.ಬಿ.ಟಿ ಮೂಲಕ ನೇಕಾರರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿರುತ್ತದೆ.

2. **ನೇಕಾರ ಸಮ್ಮಾನ್ ಯೋಜನೆ (ವಿದ್ಯುತ್‌ಮಗ್ಗ ನೇಕಾರರಿಗೆ):-** 2023-24 ನೇ ಸಾಲಿನಲ್ಲಿ 87020 ವಿದ್ಯುತ್ ಮಗ್ಗ ನೇಕಾರರಿಗೆ ನೇಕಾರ ಸಮ್ಮಾನ್ ಯೋಜನೆಯಡಿ ತಲಾ ರೂ.5,000/- ಗಳಂತೆ ಡಿ.ಬಿ.ಟಿ ಮೂಲಕ ಪಾವತಿಸುವ ಸಂಬಂಧ ಅಗತ್ಯ ಕ್ರಮಕೈಗೊಳ್ಳಲು ನಿರ್ದೇಶಕರು, ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯ (ಇಡಿಸಿಎಸ್), ಬೆಂಗಳೂರು ಇವರನ್ನು ಕೋರಲಾಗಿರುತ್ತದೆ.

3. **ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ ಯೋಜನೆ :-**
   ನೇಕಾರರ ಮಕ್ಕಳ ಹೆಚ್ಚಿನ ಹಾಗೂ ಉನ್ನತ ಶಿಕ್ಷಣ ಪ್ರೋತ್ಸಾಹಿಸಲು "ವಿದ್ಯಾರ್ಥಿ ವೇತನ" ನೀಡುವ ಯೋಜನೆಯಡಿ ಕೈಮಗ್ಗ ನೇಕಾರರ ಮಕ್ಕಳಿಗೆ ನೇರ ನಗದು ವರ್ಗಾವಣೆ ಮುಖಾಂತರ ಮಂಜೂರು ಮಾಡಲು ಸರ್ಕಾರದ ಆದೇಶ ಸಂಖ್ಯೆ: CI 34 JAKY 2022, ದಿನಾಂಕ: 19.04.2022 ರಲ್ಲಿ ಆದೇಶಿಸಲಾಗಿರುತ್ತದೆ. ಮೇಟ್ರಿಕ್ ನಂತರದ ವಿವಿಧ ಕೋರ್ಸಗಳಲ್ಲಿ ವ್ಯಾಸಂಗ ಮಾಡುತ್ತಿರುವ ನೇಕಾರರ ಮಕ್ಕಳ ಹೆಚ್ಚಿನ ಹಾಗೂ ಉನ್ನತ ಶಿಕ್ಷಣ ಪ್ರೋತ್ಸಾಹಿಸಲು "ವಿದ್ಯಾರ್ಥಿ ವೇತನ" ನೀಡುವ ಯೋಜನೆಯಡಿ ವಿವಿಧ ಕೋರ್ಸ್‌ಗಳಿಗೆ ಅನುಗುಣವಾಗಿ ಕನಿಷ್ಠ ರೂ.2,500/- ರಿಂದ ಗರಿಷ್ಠ ರೂ.11,000/- ಗಳ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. 2022-23 ನೇ ಸಾಲಿನಲ್ಲಿ 3669 ವಿದ್ಯಾರ್ಥಿಗಳಿಗೆ ರೂ164.49 ಲಕ್ಷಗಳ ವಿದ್ಯಾರ್ಥಿವೇತನವನ್ನು ಪಾವತಿಸಲಾಗಿರುತ್ತದೆ.

4. **02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ :-**
   2011-12ನೇ ಸಾಲಿನ ಆಯವ್ಯಯದಲ್ಲಿ ಪ್ರಕಟಿಸಿದಂತೆ, ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸುವ ಒಂದು ಹೊಸ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಅದರಂತೆ ಪ್ರತಿ ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳ ಖರೀದಿಗಾಗಿ ಸಹಾಯಧನ ಒದಗಿಸಲಾಗುತ್ತಿದೆ. 2022-23ನೇ ಸಾಲಿನಲ್ಲಿ ಘಟಕ ವೆಚ್ಚವನ್ನು ರೂ.3.00 ಲಕ್ಷಗಳಿಂದ ರೂ.3.50 ಲಕ್ಷಗಳಿಗೆ ಪರಿಷ್ಕರಿಸಲಾಗಿರುತ್ತದೆ.
   - ಘಟಕ ವೆಚ್ಚ ರೂ.3.50 ಲಕ್ಷ
   - ಸರ್ಕಾರದ ಸಹಾಯಧನ :
     - ಸಾಮಾನ್ಯ ವರ್ಗ - ಶೇ.50 ಗರಿಷ್ಠ ರೂ.1.75 ಲಕ್ಷ /ಬ್ಯಾಂಕ್ ಸಾಲ - ಶೇ.50
     - ಪ.ಜಾ/ಪ.ಪಂ - ಶೇ.90 ಗರಿಷ್ಠ ರೂ.3.15 ಲಕ್ಷ /ಬ್ಯಾಂಕ್ ಸಾಲ /ಫಲಾನುಭವಿ ವಂತಿಕೆ - . ಶೇ.10

   ಈ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸಾಮಾನ್ಯ, ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಗಳನ್ನೊಳಗೊಂಡಂತೆ 471 ಫಲಾನುಭವಿಗಳಿಗೆ ರೂ.1051.38 ಲಕ್ಷಗಳನ್ನು ಒದಗಿಸಲಾಗಿದೆ ಹಾಗೂ 2023-24 ನೇ ಸಾಲಿಗೆ ಈವರೆವಿಗೆ 52 ಫಲಾನುಭವಿಗಳಿಗೆ ರೂ.121.65 ಲಕ್ಷಗಳನ್ನು ಒದಗಿಸಲಾಗಿದೆ.

5. **ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ :-**

ಹಾಲಿ ಕಾರ್ಯನಿರತ ವಿದ್ಯುತ್ ಮಗ್ಗಗಳಲ್ಲಿ ವಿನ್ಯಾಸಗಳನ್ನು ಮಾರುಕಟ್ಟೆ ಬೇಡಿಕೆಗಳ ಅನುಸಾರವಾಗಿ ಪ್ರತಿ ಬಾರಿ ಬದಲಾಯಿಸಲು ನೇಕಾರನ ಶ್ರಮ ಮತ್ತು ಸಮಯ ವ್ಯರ್ಥವಾಗುವುದನ್ನು ತಪ್ಪಿಸಲು ಹಾಗೂ ಕನಿಷ್ಠ ವೆಚ್ಚದಲ್ಲಿ ಹೆಚ್ಚಿನ ವಿನ್ಯಾಸಗಳನ್ನು ಪಡೆಯಲು ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗಾಗಿ ಸಹಾಯಧನ ನೀಡಲಾಗುತ್ತಿದೆ. ಇದು ಸೀರೆಗಳಲ್ಲಿ ವಿವಿಧ ಡಿಸೈನ್‌ಗಳನ್ನು ಕಾಲ ಕಾಲಕ್ಕೆ ಅಳವಡಿಸಲು ಅನುಕೂಲವಾಗಿದೆ.

- ಘಟಕ ವೆಚ್ಚ ರೂ.4.50 ಲಕ್ಷ
- ಸರ್ಕಾರದ ಸಹಾಯಧನ :
  - ಸಾಮಾನ್ಯ ವರ್ಗ - ಶೇ.50 ಗರಿಷ್ಠ ರೂ.2.25 ಲಕ್ಷ / ಬ್ಯಾಂಕ್ ಸಾಲ - ಶೇ.50
  - ಪ.ಜಾ/ಪ.ಪಂ - ಶೇ.90 ಗರಿಷ್ಠ ರೂ.4.05 ಲಕ್ಷ / ಬ್ಯಾಂಕ್ ಸಾಲ - ಶೇ.10

ಈ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಸಾಮಾನ್ಯ, ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಗಳನ್ನೊಳಗೊಂಡಂತೆ 347 ಫಲಾನುಭವಿಗಳಿಗೆ ರೂ.962.15 ಲಕ್ಷಗಳನ್ನು ಒದಗಿಸಲಾಗಿದೆ ಹಾಗೂ 2023-24 ನೇ ಸಾಲಿಗೆ ಈವರೆವಿಗೆ 90 ಫಲಾನುಭವಿಗಳಿಗೆ ರೂ.218.68 ಲಕ್ಷಗಳನ್ನು ಒದಗಿಸಲಾಗಿದೆ.

6. **ಕಚ್ಚಾ ಮಾಲು ಖರೀದಿಯ ಮೇಲೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ ಯೋಜನೆ:-** ಈ ಯೋಜನೆಯಡಿ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ ಮುಖಾಂತರ ಕೈಮಗ್ಗ ಸಹಕಾರ ಸಂಘಗಳು ಖರೀದಿಸುವ ಕಚ್ಚಾ ನೂಲಿಗೆ ಪ್ರತಿ ಕೆ.ಜಿ. ಗೆ ರೂ.15/- ರ ಸಹಾಯಧನ ನೀಡಲಾಗುವುದು. ಸದರಿ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ 64 ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ರೂ.29.99 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿದೆ ಹಾಗೂ 2023-24 ನೇ ಸಾಲಿಗೆ ದಿನಾಂಕ: 21.11.2023 ರ ಅಂತ್ಯಕ್ಕೆ 20 ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ರೂ.4.05 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿದೆ.

7. **ಶೂನ್ಯ, ಶೇ.1 ಮತ್ತು ಶೇ.3 ರ ಬಡ್ಡಿ ಸಹಾಯಧನ ಯೋಜನೆ:-** ಈ ಯೋಜನೆಯಡಿ ನೇಕಾರರ ಸಹಕಾರ ಸಂಘಗಳು / ಸಹಕಾರ ಬ್ಯಾಂಕ್‌ಗಳಿಂದ ನೇಕಾರರಿಗೆ ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ಶೂನ್ಯ / ಶೇ.1 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ ಹಾಗೂ ಶೇ.3 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ನೀಡುವ ಸಾಲಕ್ಕೆ ಬಡ್ಡಿ ಸಹಾಯಧನ ನೀಡಲಾಗುತ್ತಿದೆ. ಸದರಿ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ 76 ಸಹಕಾರ ಸಂಘ / ಸಹಕಾರ ಬ್ಯಾಂಕ್ ಗಳಿಗೆ ರೂ.387.65 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿದೆ.

8. **ಶೇ.8 ಬಡ್ಡಿ ಸಹಾಯಧನ ಯೋಜನೆ:-** ಈ ಯೋಜನೆಯು 2022-23 ನೇ ಸಾಲಿನಿಂದ ಜಾರಿಗೆ ಬಂದಿದ್ದು, ನೇಕಾರರ ಸಹಕಾರ ಸಂಘಗಳು / ಸಹಕಾರ / ವಾಣಿಜ್ಯ ಬ್ಯಾಂಕ್ ಗಳಿಂದ ನೇಕಾರರು ಪಡೆಯುವ ಸಾಲದ ಮೇಲೆ ಶೇ.8 ರಷ್ಟು ಬಡ್ಡಿ ಸಹಾಯಧನವನ್ನು ಮರುಸಂದಾಯ ಮಾಡಲಾಗುವುದು.

9. **ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಶೇ.20 ರಷ್ಟು ರಿಬೇಟ್ ಯೋಜನೆ**:- ಈ ಯೋಜನೆಯಡಿ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಸರ್ಕಾರ ನೀಡುವ ಶೇಕಡಾ 20 ರಿಬೇಟ್ ಅನ್ನು ವರ್ಷದ 365 ದಿನಗಳು ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳಿಗೆ ರಾಜ್ಯ ಸರ್ಕಾರ ವತಿಯಿಂದ ಮರುಪಾವತಿಸಲಾಗುತ್ತಿದೆ. ಸದರಿ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ 236 ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ / ಮಹಾಮಂಡಳಿಗೆ ರೂ.1381.05 ಲಕ್ಷಗಳ ಶೇ.20 ರಿಬೇಟ್ ಅನುದಾನವನ್ನು ಒದಗಿಸಲಾಗಿದೆ ಹಾಗೂ 2023-24 ನೇ ಸಾಲಿಗೆ ದಿನಾಂಕ: 21.11.2023 ರ ಅಂತ್ಯಕ್ಕೆ 78 ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ರೂ.166.77 ಲಕ್ಷಗಳ ಶೇ.20 ರಿಬೇಟ್ ಅನುದಾನವನ್ನು ಒದಗಿಸಲಾಗಿದೆ.

10. **ಮಿತವ್ಯಯ ನಿಧಿ ಯೋಜನೆ**:- ಈ ಯೋಜನೆಯಡಿ ನೇಕಾರರಿಗೆ ಉಳಿತಾಯ ಪ್ರವೃತ್ತಿ ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಮಜೂರಿಯಿಂದ ಶೇಕಡ 8 ನ್ನು ಕಟಾಯಿಸಿ ರಾಜ್ಯ ಸರ್ಕಾರದ ಶೇಕಡ 8 ರ ಸಮಚಂದಾ ಸೇರಿಸಿ ಖಜಾನೆಯಲ್ಲಿ ಜಮಾ ಮಾಡಲಾಗುವುದು ಜಮೆಯಾದ ಮೊತ್ತ ಶೇಕಡ 12 ರ ಬಡ್ಡಿಯನ್ನು ನೀಡಲಾಗುತ್ತಿದೆ. ಈ ಹಣವನ್ನು ನೇಕಾರರು 5 ವರ್ಷಗಳ ನಂತರ ಭಾಗಶಃ ಹಿಂಪಡೆಯಬಹುದು ಮತ್ತು 15 ವರ್ಷಗಳ ನಂತರ ಭಾಗಶಃ ಹಣವನ್ನು ಬಡ್ಡಿ ಸಹಿತ ಹಿಂಪಡೆಯಬಹುದು. ಸದರಿ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ 304 ಸಹಕಾರ ಸಂಘ / ಸಹಕಾರ ಬ್ಯಾಂಕ್ ಗಳಿಗೆ ರೂ.457.35 ಲಕ್ಷಗಳ ಸಹಾಯಧನವನ್ನು ಒದಗಿಸಲಾಗಿದೆ.

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು